ಸಿ.ಸಿ 3/2022

ಪಿ.ಡಬ್ಲ್ಯೂ-1.

ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. ದಿನಾಂಕಃ 16-12-2024.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಆರ್ ಎಸ್ ಹೆಚ್ , ವಕೀಲರಿಂದಃ**

ಆರೋಪಿ ನನಗೆ ಎಷ್ಟು ವರ್ಷದಿಂದ ಪರಿಚಯ ಎಂದರೆ ನಾವು ಸಣ್ಣವರಾಗಿದ್ದಾವಗಿನಿಂದ ಪರಿಚಯ, ನಾವು ಒಂದೇ ಊರಿನವರು. ನಾನು ಮತ್ತು ಆರೋಪಿ ಬಾಲ್ಯದ ಸ್ನೇಹಿತರೆಂದರೆ ಸರಿ. ನಾವಿಬ್ಬರು ಕೂಡಿ ವ್ಯವಹಾರ ಮಾಡುತ್ತೇವೆ ಎಂದರೆ ಸರಿಯಲ್ಲ. ಅವನನ್ನು ಬಿಟ್ಟು ನಾನು ವ್ಯವಹಾರ ಮಾಡುತ್ತೇನೆ ಎಂದರೆ ಸರಿ. ಈವರೆಗೂ ನಾನು ಅವನೊಂದಿಗೆ ಯಾವುದೇ ವ್ಯವಹಾರವನ್ನು ಮಾಡಿರುವುದಿಲ್ಲ ಎಂದರೆ ಓಮಿನಿಗೆ ಸಂಬಂಧಿಸಿದ ವ್ಯವಹಾರ ಮಾತ್ರ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ವ್ಯವಹಾರವನ್ನು ಯಾವಾಗ ಮಾಡಿಕೊಂಡಿರುತ್ತೀರಿ ಎಂದರೆ 2021 ನೇ ಇಸ್ವಿಯಲ್ಲಿ ಮಾಡಿಕೊಂಡಿರುತ್ತೇನೆ, ದಿನಾಂಕ ನನಗೆ ನಿಖರವಾಗಿ ನೆನಪಿಲ್ಲ. ನನ್ನ ಪ್ರಕಾರ ಸದರಿ ವ್ಯವಹಾರವು 2021 ನೇ ಇಸ್ವಿಯಲ್ಲಿ ಆಗಿರುತ್ತದೆ ಎಂದರೆ ಸರಿ. ಯಾವ ವ್ಯವಹಾರ ನಡೆದಿರುತ್ತದೆ ಎಂದರೆ ನಾವು ಓಮಿನಿಯನ್ನು ಕೊಡುತ್ತಿದ್ದು, ಆರೋಪಿಯು ಎರಡುವರೆ ಲಕ್ಷ ರೂಪಾಯಿಗೆ ಓಮಿನಿಯನ್ನು ಖರೀದಿ ಮಾಡಿರುತ್ತಾನೆ. ಸಾಕ್ಷಿಯು ಮುಂದುವರೆದು ಆರೋಪಿ 50 ಸಾವಿರ ರೂಪಾಯಿ ಕೊಟ್ಟಿರುತ್ತಾನೆ ಎಂದು ನುಡಿಯುತ್ತಾರೆ. ಶ್ರೀರಾಮ ಫೈನಾನ್ಸನಲ್ಲಿ ಯಾರಿಗೆ ಸಂಬಂಧಿಸಿದ ಸಾಲದ ಖಾತೆಯಿತ್ತು ಎಂದರೆ ನನಗೆ ಸಂಬಂದಿಸಿದ ಸಾಲದ ಖಾತೆ ಇತ್ತು ಎಂದು ನುಡಿಯುತ್ತಾರೆ. ನಾನು ಶ್ರೀರಾಮ ಫೈನಾನ್ಸನಲ್ಲಿ 2 ಲಕ್ಷ ರೂಪಾಯಿಗಳ ಸಾಲವನ್ನು ಪಡೆದುಕೊಂಡಿದ್ದೆ. ನಾನು 8 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಆರೋಪಿ ಎಷ್ಟು ವಿದ್ಯಾಭ್ಯಾಸ ಮಾಡಿದ್ದಾನೆ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಆರೋಪಿಗೆ ಓದು, ಬರಹ ಬರುತ್ತದೆಯೋ ಇಲ್ಲವೋ ಎಂದು ಆ ಬಗ್ಗೆ ತಿಳಿದುಕೊಂಡಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಆರೋಪಿ ಹೇಗೆ ಸಹಿ ಮಾಡುತ್ತಿದ್ದರು ಎನ್ನುವ ಬಗ್ಗೆ ನನಗೆ ಮಾಹಿತಿ ಇದೆಯೇ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಆರೋಪಿ ನನಗೆ 2 ಚೆಕ್ಕುಗಳನ್ನು ಕೊಟ್ಟಿದ್ದ. ಒಂದು ಚೆಕ್ಕಿನಲ್ಲಿ ಹೆಸರು ಬರೆದು, ಸಹಿ ಮಾಡಿ ಕೊಟ್ಟಿದ್ದ, ಸದರಿ ಚೆಕ್ಕನ್ನು ನಗದೀಕರಣಕ್ಕಾಗಿ ಬ್ಯಾಂಕಿಗೆ ಹಾಜರುಪಡಿಸಿದಾಗ ಅಮಾನ್ಯಗೊಂಡಿರುತ್ತದೆ. ಸಾಕ್ಷಿಗೆ ನಿಪಿ1 ನ್ನು ತೋರಿಸಲಾಗಿ ಅದರಲ್ಲಿರುವ ಹೆಸರನ್ನು ಆರೋಪಿಯೇ ಬರೆದಿರುತ್ತಾನೆ ಎಂದು ಮತ್ತು ಸಹಿ ಮಾಡಿರುತ್ತಾನೆ ಎಂದು ನುಡಿಯುತ್ತಾರೆ. ನಾನು ಆರೋಪಿಗೆ ದುಡ್ಡು ಕೇಳಲು ಹೋದಾಗ ಆರೋಪಿ ನನ್ನ ಹೆಸರಿಗೆ ಚೆಕ್ ಬರೆದುಕೊಟ್ಟಿರುತ್ತಾನೆ. ಇನ್ನೊಂದು ಚೆಕ್ ಮನೆಯಲ್ಲಿದ್ದು ಅದಕ್ಕೆ ಆರೋಪಿ ಸಹಿ ಮಾಡಿ ಕೊಟ್ಟಿರುತ್ತಾನೆ, ಹೆಸರು ಬರೆದಿರುವುದಿಲ್ಲ. ಈ ದೂರನ್ನು ದಾಖಲಿಸುವ ಪೂರ್ವದಲ್ಲಿ ಆರೋಪಿಗೆ ನೋಟೀಸನ್ನು ನೀಡಿದ್ದಿರಾ ಎಂದರೆ ನೀಡಿದ್ದೆ ಎಂದು ನುಡಿಯುತ್ತಾರೆ. ಸದರಿ ನೋಟೀಸು ಆರೋಪಿಗೆ ಮುಟ್ಟಿರುತ್ತದೆಯೇ ಎಂದರೆ ಮುಟ್ಟಿರುವುದಿಲ್ಲ, ಸಾಕ್ಷಿಯು ಮುಂದುವರೆದು ಆರೋಪಿ ನೋಟೀಸನ್ನು ಸ್ವೀಕರಿಸಲು ನಿರಾಕರಿಸಿರುತ್ತಾನೆ ಎಂದು ನುಡಿಯುತ್ತಾರೆ. ನಿಪಿ5 ರಲ್ಲಿ ಆರೋಪಿ ಸಹಿ ಇರುವುದಿಲ್ಲ. ಆರೋಪಿಗೆ ನೋಟಿಸ್ ಜಾರಿಯಾಗಲಿಲ್ಲ ಎಂದರೆ ನಿಪಿ5 ರಲ್ಲಿರುವ ಸಹಿ ಆರೋಪಿಯದ್ದಾಗಿರುವುದಿಲ್ಲ ಎಂದು ನುಡಿಯುತ್ತಾರೆ.

2. ಆರೋಪಿ ನನಗೆ 50 ಸಾವಿರ ರೂಪಾಯಿ ಕೊಟ್ಟಿದ್ದ, ಇನ್ನು 2 ಲಕ್ಷ ರೂಪಾಯಿ ಕೊಡುವುದು ಬಾಕಿ ಇದೆ ಎಂದು ನಾನು ದೂರಿನಲ್ಲಿ ಬರೆಸಿದ್ದು, ಅದು ಸರಿ ಇದೆಯೇ ಎಂದರೆ ಸರಿ ಇದೆ ಎಂದು ನುಡಿಯುತ್ತಾರೆ. ಚೆಕ್ಕಿನಲ್ಲಿ ಅಷ್ಟೇ ಮೊತ್ತವನ್ನು ಬರೆದಿದ್ದೀರಾ ಎಂದರೆ ಇಲ್ಲ 3 ಲಕ್ಷ ಬರೆದಿದ್ದೆ ಎಂದು ನುಡಿಯುತ್ತಾರೆ. ಇವೆರೆಡರಲ್ಲಿ ಯಾವುದು ಸರಿ ಎಂದರೆ ವಾಹನವು ಎರಡುವರೆ ಲಕ್ಷ ರೂಪಾಯಿಗೆ ಖರೀದಿಗೆ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಶ್ರೀರಾಮ ಫೈನಾನ್ಸನಲ್ಲಿ ನಾನು ಸಾಲ ಮಾಡಿದ್ದು ಅದರ ಬಾಧ್ಯತೆಯಿಂದ ತಪ್ಪಿಸಿಕೊಳ್ಳುವ ಸಲುವಾಗಿ ಆರೋಪಿಯ ವಿರುದ್ಧ ಈ ಸುಳ್ಳು ಪ್ರಕರಣ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಗೆ ಇಂಗ್ಲಿಷ್ ಓದಲು, ಬರೆಯಲು ಬರುವುದಿಲ್ಲ ಎಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಮತ್ತು ಆರೋಪಿಯ ನಡುವೆ ವಾಹನಕ್ಕೆ ಸಂಬಂಧಿಸಿದಂತೆ ಯಾವುದೇ ವ್ಯವಹಾರ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ಚೆಕ್ ನಂಬರ್ ಹೇಳಬಹುದೇ ಎಂದರೆ 238741 ಎಂದು ನುಡಿಯುತ್ತಾರೆ. ಯಾವ ತಿಂಗಳು, ಯಾವ ದಿವಸದಂದು ಆರೋಪಿಗೆ ನೋಟೀಸು ಕೊಟ್ಟಿರುತ್ತೀರಿ ಎಂದರೆ ಬಹಳ ದಿನಗಳಾದ ಕಾರಣ ಆ ಬಗ್ಗೆ ನನಗೆ ಲಕ್ಷ್ಯ ಇಲ್ಲ. ಸದರಿ ನೋಟೀಸಿನಲ್ಲಿ ಏನು ಬರೆದಿದೆ ಎಂದು ಹೇಳಲು ನನಗೆ ಬರುತ್ತದೆಯೇ ಎಂದರೆ ಹೇಳಲು ಬರುತ್ತದೆ ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೇಳಿದ್ದು, ಕಲ್ಪಿಸಲಾಯಿತು.**

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ .ಹೇ.ಕೇ. ಸರಿ ಇದೆ

-Sd-

**ಪ್ರ.ದ.ನ್ಯಾ.ದಂ. ಮುಂಡಗೋಡ.**